ವಿಷಯ:- ಮೈಸೂರು ನಗರಕ್ಕೆ ರಿಂಗ್ ರೋಡ್.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 137 (1115)

ಶ್ರೀ ಎ.ರಾಮದಾಸ್ (ಕೃಷ್ಣರಾಜ್):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಕ್ಕೆ ರಿಂಗ್ ರೋಡ್ ಯೋಜನೆ ತಯಾರಿಗಿದೆಯೇ?

ಆ) ಈ ಯೋಜನೆ ಯಾವ ಹಂತದಲ್ಲಿದೆ?

ಇ) ಈ ಯೋಜನೆಗೆ ಸಂಪನ್ಮೂಲ ಕ್ರೋಡಿಕರಣಕ್ಕೆ ಕೈಗೊಳ್ಳಲಾಗಿರುವ ಕ್ರಮವೇನು?

ಈ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಎನ್.ಬಚ್ಚಗೌಡ (ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) 45 ಕಿ.ಮಿ ಉದ್ದದ ವರ್ತುಲ ರಸ್ತೆಯ ಪೈಕಿ ಕೇವಲ 6 ಕಿ.ಮೀ ಉದ್ದದ ರಸ್ತೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕಾರ್ಯಗತಗೊಳಿಸಿರುವ ವಸತಿ ಯೋಜನೆ ಹಾಗೂ ಕೆ.ಐ.ಎ.ಡಿ.ಬಿ.ಯವರು ಅಭಿವೃದ್ಧಿಪಡಿಸಿರುವ ಕೈಗಾರಿಕಾ ಬಡಾವಣೆಗಳ ಭಾಗಗಳಾಗಿ ಅಭಿವೃದ್ಧಿಪಡಿಸಲಾಗಿದೆ

ಇ) ಪಶ್ಚಿಮ ಭಾಗದ ಅರ್ಧ ಹೊರ ವರ್ತುಲ ರಸ್ತೆಯನ್ನು ಕಾರ್ಯಗತಗೊಳಿಸಲು ಏಷಿಯನ್ ಅಭಿವೃದ್ಧಿ ಬ್ಯಾಂಕ್ 536.52 ಲಕ್ಷ ರೂ.ಗಳನ್ನು ಧನ ಸಹಾಯ ಮಾಡಲಿದೆ. ಪೂರ್ವಾರ್ಧದ ಹೊರವರ್ತುಲ ರಸ್ತೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ವಿವಿಧ ವಸತಿ ಯೋಜನೆಗಳನ್ನು ತೆಗೆದುಕೊಂಡಾಗ ಅವುಗಳ ಭಾಗವಾಗಿ ಕಾರ್ಯಗತಗೊಳಿಸಲಾಗುವುದು.

ಈ) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಧನ ಸಹಾಯ ಮಾಡಲಿರುವ ಪಶ್ಚಿಮಾರ್ಧದ ಹೊರವರ್ತುಲ ರಸ್ತೆಯನ್ನು ಮುಂದಿನ ಮೂರು ವರ್ಷಗಳ ಒಳಗಾಗಿ ಪೂರ್ಣಗೊಳಿಸುವ ಅಂದಾಜು ಇದೆ. ಪೂರ್ವಾರ್ಧದ ಹೊರವರ್ತುಲ ರಸ್ತೆಯ ಬಗ್ಗೆ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ರಾಮದಾಸ್:- ಮಾನ್ಯ ಅಧ್ಯಕ್ಷರೇ ಮೈಸೂರು ನಗರದ ರಿಂಗ್ ರೋಡ್ ಕೆಲಸ ಯಾವ ಹಂತದಲ್ಲಿದೆ ಎಂದು ಕೇಳಿದ್ದೇನೆ. ಪ್ರಥಮವಾಗಿ ಆ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಭೂಸ್ವಾಧೀನಪಡಿಸಿಕೊಂಡಿರುವ ಬಗ್ಗೆ ಯಾವುದೇ ಮಾಹಿತಿಯನ್ನು ಇಲ್ಲಿ ಕೊಟ್ಟಿಲ್ಲ. ಭೂಮಿಯನ್ನು ಸ್ವಾದೀನಪಡಿಸಿಕೊಳ್ಳುವುದಕ್ಕೆ ಆಗದೇ

ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಮತ್ತು ನಗರಾಭಿವೃದ್ಧಿ ಪ್ರಾಧೀಕಾರದ ವತಿಯಿಂದ ರಿಂಗ್ ರೋಡ್ ಆಗುವಂತಹ ಕೆಲಸ ಪ್ರಾರಂಭವಾಗಿದೆ ಎಂದು ಕೊಟ್ಟಿರುವುದು ಅಪಹಾಸ್ಯದ ಒಂದು ವಿಚಾರ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೇಯದಾಗಿ ಭೂಸ್ವಾಧೀನ ಆಗಿದೆಯೇ ಅಥವ ಇಲ್ಲವೇ ಎನ್ನುವುದಕ್ಕೆ ಉತ್ತರ. ಎರಡನೆಯದಾಗಿ, ರಿಂಗ್ ರೋಡಿನ ಭಾಗದಲ್ಲಿ ಬರುವಂತಹ ಕೆಲವು ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳದೇ ಪ್ರಭಾವಿ ವ್ಯಕ್ತಿಗಳಿಗೆ ಮತ್ತು ಅವರ ಸಂಬಂಧಿಕರಿಗೆ ಆ ಪ್ರದೇಶವನ್ನು ಡಿ ನೋಟಿಫೈ ಮಾಡಿ, ಅವರಿಗೆ ಬಿಟ್ಟುಕೊಟ್ಟಿರುವಂಥಾದ್ದು ಈ ರಿಂಗ್ ರೋಡ್ ವ್ಯಾಪ್ತಿಯಲ್ಲಿ ಬರುತ್ತದೆಯೇ ಅಥವಾ ಇಲ್ಲವೇ ಎಂದು ನಾನು ಸರ್ಕಾರವನ್ನು ಕೇಳಲು ಇಚ್ಛಿಪಡುತ್ತೇನೆ. ಮೂರನೆಯದಾಗಿ ರಿಂಗ್ ರೋಡಿನ ಇಂಟರ್‌ರಿಂಗ್ ರೋಡಿನ ಬಗ್ಗೆ ಯಾವುದೇ ಒಂದು ಪ್ರಸ್ತಾಪವನ್ನು ಸಹ ಈ ಉತ್ತರದಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿಲ್ಲ. ಆ ಬಗ್ಗೆಯೂ ಕೂಡ ನಾನು ಉತ್ತರವನ್ನೆ ಕೇಳಲು ಇಷ್ಟಪಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, 1991ರಲ್ಲಿ ಮೈಸೂರು ನಗರದ ಔಟರ್ ರಿಂಗ್ ರೋಡ್, ಏಕೆಂದರೆ ಬೆಂಗಳೂರಿನಿಂದ ಬರುವಂತಹ ರಸ್ತೆ, ಮಹದೇವಪುರ ರಸ್ತೆ, ಬನ್ನೂರು ರಸ್ತೆ ಮತ್ತು ಟಿ.ನರಸೀಪುರ ರಸ್ತೆ, ಹಾಗೂ ಊಟಿ ರಸ್ತೆಯ ಪೂರ್ವಭಾಗದಲ್ಲಿ ಮತ್ತು ಹೆಗ್ಗಡದೇವನಕೋಟೆ ರಸ್ತೆ, ಬೋಗಾದಿ ರಸ್ತೆ, ಹುಣಸೂರು ರಸ್ತೆ, ಕೆ.ಆರ್.ಎಸ್.ರಸ್ತೆ ಮತ್ತು ಬೆಂಗಳೂರು ರಸ್ತೆಗಳ ಪಶ್ಚಿಮ ಭಾಗದಲ್ಲಿ ಮಾಡುವಂತಹ ಕೆಲಸ. ರಿಂಗ್‌ರೋಡ್ ಬಗ್ಗೆ ತಾವು ಕೇಳುವಂಥಾದ್ದು. ಇದನ್ನು 1991ರಲ್ಲಿ ತಾತ್ಕಾಲಿಕವಾಗಿ ಮಂಜೂರಾತಿ ಪಡೆದು ಮೂಡಾದವರು ಸ್ವಲ್ಪ ಭಾಗ ತೆಗೆದುಕೊಂಡು ಒಂದು ಆರು ಕಿಲೋಮೀಟರ್ ಕೆಲಸವನ್ನು ಮಾಡಿದ್ದಾರೆ. ಮೂಡಾದಿಂದ ಆಗಿರತಕ್ಕಂಥಾದ್ದು ಈಸ್ಟನ್ ಪೋರ್ಷನ್.ಇದು ತಮಗೆ ಗೊತ್ತಿದೆ. ಹಾಗೆಯೇ ಎಡಿಪಿಯವರು 23 ಕಿಲೋಮೀಟರ್ ತೆಗೆದುಕೊಳ್ಳುವಂತಹ ಯೋಜನೆ 536 ಲಕ್ಷ ರೂಪಾಯಿಗಳಿಗೆ ಮಂಜೂರಾತಿ ಆಗಿದೆ. 1997ರಲ್ಲಿ ಪ್ರಾರಂಭ ಮಾಡಿ ಮೂರು ವರ್ಷಗಳಲ್ಲಿ ಮುಗಿಸಿಕೊಡುವಂತಹ ಒಂದು ಕಾರ್ಯವನ್ನು ಮಾಡುತ್ತೇವೆ. ಈಗಾಗಲೇ ಏಷಿಯಾ ಅಭಿವೃದ್ಧಿ ಬ್ಯಾಂಕ್‌ಗೆ ಪೋಸ್ಟ್ ಮಾಡಿದೆ ಎಂ.ಒ.ಯು. ಎಲ್ಲಾ ಆಗಿದೆ. ಆದ್ದರಿಂದ ತಡ ಆಗುವುದಿಲ್ಲ. ತಾವು ಹೇಳಿರುವ ಪ್ರಶ್ನೆ ಭೂ ಸ್ವಾಧೀನ ತೆಗೆದುಕೊಂಡು ಅದನ್ನು ಮಾಡಬೇಕು ಎಂದು ಹೇಳಿ, ಅದಕ್ಕೂ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಇಷ್ಟೇ ಭೂಸ್ವಾಧೀನ ಇವತ್ತಿನವರೆಗೂ ಆಗಿಲ್ಲ ಅಂತ ಅಡ್ಜಿಟ್ ಮಾಡಿಕೊಳ್ಳುತ್ತಿದ್ದಾರೆ. ಭೂಸ್ವಾಧೀನ ಮಾಡಿಕೊಳ್ಳದೇ ಆರು ಕಿಲೋಮೀಟರ್ ರಸ್ತೆ ಮಾಡಿದ್ದೇವೆ ಎನ್ನುವುದು ಎಷ್ಟು ಔಚಿತ್ಯ? ಮಾನ್ಯ ಸಚಿವರು ಕಳೆದ ಸಲ ನಾನು ಬರುತ್ತೇನೆಂದು ಹೇಳಿದಾಗ ಅವರನ್ನು ಕರೆದುಕೊಂಡು ಹೋಗಬೇಕೆಂದು ಯೋಚನೆ ಮಾಡಿದ್ದೆ. 6 ಕಿಲೋ ಮೀಟರ್ ರಸ್ತೆ

ಮಾಡಲಾಗಿದೆ ಅಂತ ಹೇಳಿ ಇಂಜಿನೀಯರ್ ಬಿಲ್ ತೆಗೆದುಕೊಂಡಿದ್ದಾರೆ ಆದರೆ ಕಂಟ್ರಾಕ್ಟರ್‌ಗೆ ಇದುವರೆಗೂ ಹಣ ಕೊಟ್ಟಿಲ್ಲ. ಭೂಸ್ವಾಧೀನ ಇವತ್ತಿನವರೆಗೂ ಕೂಡ ಆಗಿಲ್ಲ. ಪೂರ್ವಭಾಗದಲ್ಲಿ ಆಗಿದೆ ಅಂತ ಹೇಳಿದ್ದಾರೆ ಇದುವರೆಗೂ ಒಂದೇ ಒಂದು ನೋಟಿಫಿಕೇಷನ್ ಸಹ ಬಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಈಗ ಸಾಲ ಬಂದಿದೆ. ನೋಟಿಫಿಕೇಶನ್ ಆಗದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೇ ಈ ರೀತಿ ಹೇಳಿದರೆ ಇದು ಎಷ್ಟು ಔಚಿತ್ಯ?

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ 6 ಕಿಲೋಮೀಟರ್ ರಸ್ತೆಯನ್ನು ಮೂಡಾದಿಂದ ಮಾಡಿರತಕ್ಕಂಥಾದ್ದು. ಫೋರ್ ಒನ್ ನೋಟಿಫಿಕೇಶನ್ ಈಗಾಗಲೇ ಕೊಟ್ಟಿದ್ದೇನೆ. ಫೋರ್ ಒನ್ ನೋಟಿಫಿಕೇಶನ್ ಆಗಿ ಅಕ್ವಿಜೆಶನ್ ಪ್ರೊಸೀಡಿಂಗ್ಸ್‌ನ್ನು ಇನ್‌ಷಿಯೇಟ್ ಮಾಡಿದ್ದೇವೆ. ಈ ವರ್ಷದ ಕೊನೆಗೆ ಎಡಿಪಿ ಮತ್ತು ಎಂಬಯು ಎಲ್ಲಾ ಮುಗಿಯುತ್ತಾ ಇರುವುದರಿಂದ 1997ರಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆ. ಪ್ರಿಲಿಮಿನರಿ ನೋಟಿಫಿಕೇಶನ್ ಅಕ್ವಿಜೇಶನ್ ಆದ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ ಪ್ರಭಾವಿ ರಾಜಕಾರಣಿ ಒಬ್ಬರಿಗೆ ರಿಂಗ್ ರೋಡ್‌ನಲ್ಲಿ ಬರುವಂತಹ ಪ್ರದೇಶವನ್ನು ಸರ್ಕಾರ ಡಿನೋಟಿಫೈ ಮಾಡಿದೆ. ಅವರಿಗೆ ಭೂಮಿಯನ್ನು ಬಿಟ್ಟು ಕೊಟ್ಟಿದೆ.

ಅಧ್ಯಕ್ಷರು:- ಯಾರು ಆ ಪ್ರಭಾವಿ ರಾಜಕಾರಣಿ ಹೇಳಿ? ಇಂತಹ ಸರ್ವೇ ನಂಬರ್ ಅಂತ ಹೇಳಿದರೆ ಹೌದೋ ಅಥವ ಅಲ್ಲವೋ ಎಂದು ಅವರು ಹೇಳುತ್ತಾರೆ. ಎಲ್ಲರೂ ಪ್ರಭಾವಿ ರಾಜಕಾರಣಿಗಳೇ

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ ಇಣಕಲ್ಲು ಗ್ರಾಮದ 149ನೇ ಸರ್ವೆ ನಂಬರು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದರೂ ಕೂಡ ಅದು ಅವರಿಗೆ ಬಿಟ್ಟುಕೊಡುವಂತಹ ಕೆಲಸ ಆಗಿದೆ.

ಅಧ್ಯಕ್ಷರು:- ಅವರು ಪರ್ಟಿಕ್ಯುಲರ್ ಸರ್ವೆ ನಂಬರು ಏನು ಹೇಳುತ್ತಾರೆ ಅದನ್ನು ತಾವು ದಯವಿಟ್ಟು ವೆರಿಫೈ ಮಾಡಿ.

ಶ್ರೀ ಬಿ.ಎನ್.ಬಚ್ಚೇಗೌಡ:- ಯಾವ ಪ್ರಭಾವಿ ರಾಜಕಾರಣಿಗೂ ಒಳಗಾಗುವುದಿಲ್ಲ. ಏನು ಔಟರ್ ರಿಂಗ್ ಮಾಡಬೇಕೆಂದು ಇದ್ದೇವೆಯೋ ಇವೆಲ್ಲವನ್ನು ತೆರವು ಮಾಡಿ ಅದನ್ನು ಮಾಡಿಯೇ ಮಾಡುತ್ತೇವೆ. ಅದರ ಬಗ್ಗೆ ತಾವೇನು ಯೋಚನೆ ಮಾಡುವ ಅವಶ್ಯಕತೆ ಇಲ್ಲ.

ವಿಷಯ:- ಹುಬ್ಬಳ್ಳಿನಗರದ ಉಣಕಲ್ ಕೆರೆಯ ಶುದ್ಧೀಕರಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 138 (674)